ಪ್ರಜಾವಾಣಿ

## ‘ಮಹಿಳಾ ಸಬಲೀಕರಣ’ ಕಾರ್ಯಾಗಾರ

ಜೈನ್ ವಿಶ್ವವಿದ್ಯಾಲಯ ಸಮೂಹದ ಸಿ.ಎಂ.ಎಸ್. ಬಿಸಿನೆಸ್ ಶಾಲೆಯಲ್ಲಿ ಇದೇ ಬುಧವಾರ (ಜ. 23) ‘ಮಹಿಳಾ ಸಬಲೀಕರಣ’ ವಿಷಯ ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಹಲ್ಲೆ, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮನೆಯ ಒಳಗೆ ಮತ್ತು ಹೊರಗೆ ಮಹಿಳೆಯರ ಹಕ್ಕು, ಜವಾಬ್ದಾರಿ ಹಾಗೂ ಕರ್ತವ್ಯಗಳು, ಸಂವಹನಾ ಕೌಶಲ ಮತ್ತಿತರ ವಿಷಯಗಳ ಬಗ್ಗೆ ವಿಷಯ ಮಂಡನೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: ಸಿ.ಎಂ.ಎಸ್. ಬಿಸಿನೆಸ್ ಸ್ಕೂಲ್, ನಂ 319, 17 ನೇ ಅಡ್ಡರಸ್ತೆ, 25 ನೇ ಮುಖ್ಯ ರಸ್ತೆ, ಜೆ.ಪಿ.ನಗರ 6 ನೇ ಹಂತ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 4343 0400.